ಬಿ. ಡಿ. ಎ. ನಿವೇಶನಗಳ ಹಂಚಿಕೆ ಪ್ರಕಟಣೆಯಿಂದ ಬಂದ ಹಣ

೮೧೨ (೨೩೦) ಶ್ರೀ ಎ. ಕೃಷ್ಣಪ್ಪ (ವರ್ತೂರು). — ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಸಾರ್ವಜನಿಕರಿಗೆ ನಿವೇಶನಗಳನ್ನು ಹಂಚುವುದಾಗಿ ಪ್ರಕಟಿಸಿ, ಕಳೆದ ಮೂರು ವರ್ಷಗಳಲ್ಲಿ ಎಷ್ಟು ಹಣವನ್ನು ಪಡೆದಿದೆ ಹಾಗೂ ಎಷ್ಟು ಮಂದಿಯಿಂದ ಪಡೆದಿದೆ ?

ಆ) ಆ ಪೈಕಿ ಪ್ರಾಧಿಕಾರ ಎಷ್ಟು ಮಂದಿಗೆ ನಿವೇಶನಗಳನ್ನು ನೀಡಿದೆ ?

ಇ) ಇವುಗಳಲ್ಲಿ ಆದಲು–ಬದಲು ನಿವೇಶನಗಳನ್ನು ಕೋರಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು ? ಹಾಗೂ ಎಷ್ಟು ಮಂದಿಗೆ ಆ ರೀತಿ ಬದಲಿ ನಿವೇಶನಗಳನ್ನು ಮಂಜೂರು ಮಾಡಲಾಗಿದೆ ?

ಶ್ರೀ ವಿರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ೧,೯೭,೬೫೭ ಅರ್ಜಿದಾರರಿಂದ ರೂ. ೨೫.೭೮ ಗಿ,೨೫೬–೦೦ ಗಳನ್ನು ಪಡೆದಿದೆ.

ಆ) ೧೭,೬೫೯ ಅರ್ಜಿದಾರರಿಗೆ ನಿವೇಶನಗಳನ್ನು ಹಂಚಿದೆ.

ಇ) ೫೨ ಆದಲು–ಬದಲು ನಿವೇಶನಗಳಿಗಾಗಿ ಅರ್ಜಿಗಳನ್ನು ಸ್ವೀಕರಿಸಿದ್ದು, ಅವುಗಳಲ್ಲಿ ಕೋರಲಾಗಿರುವಂತೆ ೪೯ ಅರ್ಜಿದಾರರಿಗೆ ಬದಲಾವಣೆ ಮಾಡಿಕೊಡಲಾಗಿದೆ.

ಸಹಕಾರ ಸಂಘಗಳ ಆಡಳಿತ ಮಂಡಳಿ ನಿರ್ದೇಶಕರುಗಳಿಗೆ ದಿನಭತ್ಯೆ ಹೆಚ್ಚಳ

೮೧೪ (೧೬೪೫) ಶ್ರೀ ಜೆ. ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ). ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಸಹಕಾರ ಕಾಯಿದೆ ಕೆಳಗೆ ರಾಜ್ಯಮಟ್ಟದ, ಜಿಲ್ಲಾಮಟ್ಟದ ಹಾಗೂ ತಾಲ್ಲೂಕು ಮಟ್ಟದ ಸಹಕಾರ ಸಂಘಗಳ ಮಂಡಳಿ ನಿರ್ದೇಶಕರುಗಳಿಗೆ ಕೊಡುತ್ತಿರುವ ದಿನಭತ್ಯೆ ಹಾಗೂ ಪ್ರಯಾಣ ಭತ್ಯೆ ಅತ್ಯಂತ ಕನಿಷ್ಟ ಹಾಗೂ ಬಹಳ ಹಿಂದೆ ನಿಗದಿಯಾದ ವಿಷಯ ಸರ್ಕಾರಕ್ಕೆ ತಿಳಿದಿದೆಯೇ ?

ಆ) ಹಾಗಿದ್ದಲ್ಲಿ ಇದನ್ನು ಹೆಚ್ಚಿಸುವ ಆಲೋಚನೆ ಸರ್ಕಾರದ ಮುಂದೆ ಇದೆಯೇ ?

ಇ) ಹಾಗಿದ್ದಲ್ಲಿ ಇದನ್ನು ಎಷ್ಟರ ಮಟ್ಟಿಗೆ ಮತ್ತು ಯಾವ ಕಾಲಕ್ಕೆ ಹೆಚ್ಚಿಸಲಾಗುವುದು ?

ಈ) ಇಲ್ಲದಿದ್ದಲ್ಲಿ ಸಹಕಾರ ಸಂಘಗಳು ಪ್ರತಿನಿತ್ಯ ಬೆಂಗಳೂರಿಗೆ ಸದರಿ ಜಿಲ್ಲಾ ಕೇಂದ್ರಕ್ಕೆ ಬಂದು ಹೋಗಲು ಉಂಟಾಗುತ್ತಿರುವ ತೊಂದರೆಗಳಿಗೆ ಬೇರೆ ಪರಿಹಾರ ಕೊಡಲು ಸರ್ಕಾರ ಆಲೋಚಿಸುತ್ತಿದೆಯೇ ?

ಡಾ॥ ಎಚ್. ಆರ್. ರಾಜು (ಸಹಕಾರ ರಾಜ್ಯ ಸಚಿವರು).—

ಅ) ದಿನಭತ್ಯೆ ಮತ್ತು ಪ್ರಯಾಣಭತ್ಯೆಗಳ ದರಗಳನ್ನು ೧೯೮೦ರಲ್ಲಿ ನಿಗದಿ ಪಡಿಸಿದ್ದಾಗಿರುತ್ತದೆ.

ಆ) ದರಗಳನ್ನು ಪರಿಷ್ಕರಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಇ) ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಈ) ಉದ್ಭವಿಸುವುದಿಲ್ಲ.

ದ. ಕ. ಜಿಲ್ಲೆಯಲ್ಲಿ ಸ್ಮಶಾನಕ್ಕೆ ಜಾಗ ಕಾದಿರಿಸದೇ ಇರುವ ಬಗ್ಗೆ

೮೧೫ (೧೬೧೫) ಶ್ರೀ ಬಿ. ರಾಮಪ್ಪಯ್ಯ ಪೂಜಾರಿ (ವಿಟ್ಲ). — ಮಾನ್ಯ ಕಂದಾಯ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ: —

ಅ) ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚಿನ ಗ್ರಾಮಗಳಲ್ಲಿ ಸ್ಮಶಾನಕ್ಕೆ ಜಾಗ ಕಾದಿರಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?